ವಾಕಿಂಗ್‌ನ ಕೊನೆಯ ರೌಂಡಿನಲ್ಲಿದ್ದಾಗ ಒಂದು ಮುಳ್ಳಿನಂಥ ಕಡ್ಡಿ ಶ್ರೀರಾಮೇಗೌಡರ ಪ್ಯಾಂಟಿನಂಚಿಗೆ ಸಿಕ್ಕಿಕೊಂಡಿತು. ಮಾತಿನ ಮಧ್ಯೆ ಇಬ್ಬರೂ ಅದನ್ನು ಗಮನಿಸಿರಲಿಲ್ಲ. ತಮ್ಮ ಹಿಂದುಗಡೆ ನಾಯಿ ಜೊತೆ ಆಟವಾಡುತ್ತ ಬರುತ್ತಿದ್ದ ಹುಡುಗಿ 'ಅಯ್ಯಾ ಅಯ್ಯಾ ನಿಲ್ಲಿ' ಅಂತ ಓಡಿ ಬಂದು ಕಾಲಿಗೆ ಅಡ್ಡವಾಗಿದ್ದ ಕಡ್ಡಿಯನ್ನು ಬಿಡಿಸಿ, ಬೇಲಿ ಕಡೆಗೆ ಎಸೆದಿದ್ದಳು. ಹಾದಿಹೋಕರ ನಡುವೆ ಇಂಥ ನೆರವು, ಸಹಕಾರ ಬಹು ವ್ಯವಹಾರೀಕರಣಗೊಂಡಿದ್ದ ಪರಿಣಾಮ 'ಥ್ಯಾಕ್ಸಮ್ಮ' ಅಂತ ಶಾಸ್ತ್ರದ ಒಂದು ಮಾತು ಹೇಳಿ ಮುಂದೆ ಹೋಗಿದ್ದರು. ಆದರೆ ವಾಸುದೇವಯ್ಯ ಹಿಂದೆ ತಿರುಗಿ, 'ನೋಡಿ' ಅಂದರು. ಹುಡುಗಿ ಏನೂ ಆಗೇ ಇಲ್ಲವೆಂಬಂತೆ ತನ್ನ ನಾಯಿಯ ಮೂತಿಯನ್ನು ಅಪ್ಪಿ ಹಿಡಿದು ಅದರ ಜೊತೆ ಗುದುಮುರಿಯಾಡುತ್ತ ಬರುತ್ತಿದ್ದಳು. ವಾಸುದೇವಯ್ಯನವರೇ ಪುನೈಸಿ 'ನೋಡಿ ಗೌಡ್ರೇ, ಈ ಹುಡುಗಿ ಒಂಥರಾ ಸ್ಪೆಷಲ್ ಇದ್ದಾಳೆ. ಯಾರದೋ ಮನೆ ನಾಯಿನ ಮುದ್ದಿಸೋದು ನೋಡಿ, ಆಡಿಸೋದು ನೋಡಿ ಮಗು ನೋಡ್ಕೊಂಡಂಗೆ ನೋಡ್ಕೊಳ್ತದೆ. ಅದ್ಕೆ ಎಲ್ಲದರ ಮೇಲೂ ಎಷ್ಟು ಪ್ರೀತಿಯಿದೆ ನೋಡಿ. ಅಷ್ಟೆ ಯಾಕೆ, ಈ ಫುಟ್‌ಪಾತ್ ನೋಡಿದ್ದೀರಲ್ಲ?' ಅಂತ ಪಕ್ಕದಲ್ಲಿದ್ದ ಶ್ರೀರಾಮೇಗೌಡರ ಮುಖ ನೋಡಿದರು. ಇವರು ಇದರಲ್ಲಿ ವಿಶೇಷವೇನಿದೆ ಎಂಬಂತೆ ಕತ್ತು ಕುಣಿಸಿದರು. ವಾಸುದೇವಯ್ಯನವರೇ ಮುಂದುವರಿಸುತ್ತ 'ವಿಶೇಷನೇ! ಈ ಫುಟ್‌ಪಾತಿನ ಕಸಕಡ್ಡಿನ್ನೆಲ್ಲ ಆಗಾಗ ಕ್ಲೀನ್ ಮಾಡ್ತಿರೋರು ಕಾರ್ಪೋರೇಷನ್ನವರಲ್ಲ, ಈ ಪುಟ್ಟ ಹುಡುಗಿ! ಎದುರಿಗೆ ಸಿಕ್ಕ ಕಡ್ಡಿಯನ್ನೆಲ್ಲ ಬಿಡದೆ ಎತ್ತಾಕುತ್ತೆ. ಈ ಚಿಕ್ಕವಯಸ್ಸಿಗೆ ಎಂಥ ದೊಡ್ಡಬುದ್ಧಿ! ಇದ್ಯಾವ ಹುಡುಗಿ? ಎಲ್ಲಿಂದ ಬರ್ತಿದೆ? ಯಾರಿಗೂ ಹೇಳೋದಿಲ್ಲ; ಯಾರಿಂದಲೂ ಹೇಳಿಸ್ಕೊಳ್ಳೋದಿಲ್ಲ. ಇದು ಯಾರೋ ಮಾಡಬೇಕಾದ ಕೆಲ್ಸ ಅಂತ ಭಾವಿಸೋದಿಲ್ಲ. ಅನಿಸಿದ್ದನ್ನು ಮಾಡುತ್ತ ತನ್ನಷ್ಟಕ್ಕೇ ತಾನೇ ಎಷ್ಟು ಸಂಭ್ರಮಿಸುತ್ತೆ ನೋಡಿ. ದಿಸ್ ಈಸ್ ಸಂಥಿಂಗ್ ಗ್ರೇಟ್!' ಅನ್ನುತ್ತ ಅವಳತ್ತ ತಿರುಗಿದರು. ಅವಳು ಐದಾರು ಕಡ್ಡಿ ಹಿಡಕೊಂಡು ನಾಯಿ ಜೊತೆ ಚಿಕ್ಕ ಓಟದ ಸ್ಪರ್ಧೆ ಏರ್ಪಡಿಸಿಕೊಂಡಿದ್ದಳು.

ಶ್ರೀರಾಮೇಗೌಡರು ಹೆಜ್ಜೆ ಮೇಲೆ ಹೆಜ್ಜೆ ಇಟ್ಟು ಹುಲ್ಲು ಸಂದಿಯಲ್ಲಿ ಮೇವು ಹುಡುಕುತ್ತ ನಡೆದ ಒಂಟಿಕೋಳಿಯಂತೆ ನಡೆಯತೊಡಗಿದರು. ವಾಸುದೇವಯ್ಯನವರು ಹೇಳಿದ್ದ ಹುಡುಗಿಯ ಕೆಲಸಕ್ಕೆ ಗೌರವ ಕೊಡುವ ಪರಿಯಲ್ಲಿ ಪಾತ್ ಅನ್ನು ಅವಲೋಕಿಸುತ್ತಿದ್ದರು. ಎರಡ್ಮೂರು ದಿನದಿಂದ ಕಸಕಡ್ಡಿ ಎತ್ತಿರುವ ಸುಳಿವಿರಲಿಲ್ಲ. ಅದೇ ಸಮಯಕ್ಕೆ ಒಂದು ಕಡ್ಡಿ ಬೂಟಿನ ತುದಿಗೆ ಸಿಕ್ಕಿ ಸಿಡಿದು ಮೇಲೆಗರಿತು. ಅದನ್ನು ಬಗ್ಗಿ ತೆಗೆದು ಬೇಲಿ ಸಾಲಿಗೆ ಎಸೆಯಬೇಕೆಂಬ ಇಚ್ಛೆ ಸುಳಿದೋರಿದರೂ ಕೆಲಸ ಮಾಡಿಸಿಕೊಳ್ಳುವುದಕ್ಕಷ್ಟೇ ರೂಢಿಗೊಂಡ ಮನಸ್ಸಿನಲ್ಲಿ ವಸ್ತುತಃ ಅದು ಮೂರ್ತಗೊಳ್ಳಲಿಲ್ಲ.

ಇದೆಂಥ ಮನಸ್ಸು ಮತ್ತು ಧೋರಣೆ? ಈ ತಳಮಳಕ್ಕೂ ಪೂರ್ವನಿರ್ಧರಿತ ಧೋರಣೆಗೂ ಎಷ್ಟು ಅಂತರ?

ಶ್ರೀರಾಮೇಗೌಡರಿಗೆ ಒಂದು ಕ್ಷಣ ಕತ್ತಲೆಯೊಳಗೆ ಪುಟ್ಟಕೋಲ್ಮಿಂಚು ಹರಿದು ಮರೆಯಾದ ಹಾಗೆ! ಅವರಿಗೆ ಹುಡುಗಿ ಬಂದಿಲ್ಲದಿರುವ ಬಗ್ಗೆ ಅನುಮಾನ ಉಂಟಾಯಿತು. ಅತ್ತಿತ್ತ ದೃಷ್ಟಿ ಹಾಯಿಸಿದರು. ಆ ಹುಡುಗಿಯಾಗಲೀ ಅವಳೊಟ್ಟಿಗೆ ಇರುತ್ತಿದ್ದ ನಾಯಿಯಾಗಲಿ ಇಲ್ಲೆಲ್ಲೊ ಸುತ್ತು ಹಾಕುತ್ತಿರಬಹುದೆ? ಯಾವುದಾದರೂ ಮರದ ಬುಡದ ಸುತ್ತ ಆಡುತ್ತಿರಬಹುದೆ? ಅಥವಾ ಇದಾಗಲೇ ಬಂದು ಹೋಗಿರಬಹುದೆ? ಅಥವಾ ನಾಳೆ ಬರಬಹುದೆ? ಅಥವಾ ಹುಟ್ಟಿಸಿದವರೊಂದಿಗೆ ತನ್ನ ಹುಟ್ಟೂರಿಗೆ ಹೋಗಿರಬಹುದೆ? ಮುಂಗಾರು ಮಳೆ ಬರುವಿನ ವಾಸನೆ ಹಿಡಿದು ಭೂಮಿಯೊಳಗಿನಿಂದ ಬುದು ಬುದನೆ ಕಡೆಯುವ ಈಚಲು ಚಿಟ್ಟೆಯಂತೆ ಈ ಪ್ರಶ್ನೆಗಳು!

ಶ್ರೀರಾಮೇಗೌಡರು ದೀರ್ಘ ಉಸಿರುಬಿಟ್ಟು ಮುಖವನ್ನು ಪರಪರನೆ ಸವರಿಕೊಂಡರು. ಹುಟ್ಟಿದ ಹಲವಾರು ಪ್ರಶ್ನೆಗಳಿಗೆ ಒಂದಿನಿತು ಉತ್ತರ ಹೊಳೆಯದಾಗಿನ ಪರಿಸ್ಥಿತಿ ಅದು!

ಹುಡುಗಿ ಬಂದಿಲ್ಲ. ಇವತ್ತಷ್ಟೇ ಅಲ್ಲ, ಮೂರ್ನಾಕು ದಿನಗಳಿಂದಲೂ ಇತ್ತ ಬಂದಂತಿಲ್ಲ. ಬಂದಿದ್ದರೆ ವಾಕಿಂಗ್ ಪಾತಿನಲ್ಲಿ ಇಷ್ಟು ಕಡ್ಡಿಕಸ ಬಿದ್ದಿರುತ್ತಿರಲಿಲ್ಲ! ಒಂದೇ ಸಮನೆ ತುಡಿಯುತ್ತಿದ್ದ ಅವರ ಒಳಮನಸ್ಸು ನಿಧಾನವಾಗಿ ಪಿಸುಗುಟ್ಟಿತು: ಬಹುಶಃ ಇದೇ